# IN THE COURT OF THE ADDL. SENIOR CIVIL JUDGE & JMFC., GUBBI

# **OS – 60/2020**

Witness present and duly sworn on : 23.11.2023.

Further cross Examination: by Counsel for plaintiff :

ವಾದಿಯ ತಾತ ಪುಟ್ಟಣ್ಣವರಿಂದ ಬಂದಂತಹ ಪಿತ್ರಾರ್ಜಿತ ಆಸ್ತಿಗಳ ವಿವರಗಳು ಯಾವುವು ಎಂದರೆ ಸರ್ವೆ ನಂ.26/3, ಉಳಿದ ಜಮೀನುಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ಮೂಕನಹಳ್ಳಿ ಪಟ್ಟಣದ ಜಮೀನು. ವಾದಿಯ ತಾಯಿ ಸುಜಾತರವರಿಗೆ ಅವರ ಮನೆಯಿಂದ ಬಂದ ಆಸ್ತಿಯ ವಿವರಗಳು ಯಾವುದು ಎಂದರೆ ಸರ್ವೆ ನಂ.127/2 ಬಿ. ಸದರಿ ಸುಜಾತರವರು ಯಾವ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸರ್ವೆ ನಂ.127/2 ಬಿ ಮತ್ತು ಸರ್ವೆ ನಂ.94. ಸದರಿ ಸುಜಾತರವರ ತಂದೆಯ ಹೆಸರು ರಾಮಚಂದ್ರಪ್ಪ. 1 ನೇ ಪ್ರತಿವಾದಿಯ ಹುಟ್ಟಿದ ಊರು ಮೂಕನಹಳ್ಳಿ ಪಟ್ಟಣ. 1 ನೇ ಪ್ರತಿವಾದಿಯು ಮೂಕನಹಳ್ಳಿ ಪಟ್ಟಣದಲ್ಲಿ ಸುಮಾರು 25 ವರ್ಷಗಳ ಕಾಲ ಇದ್ದರು. ದಾವಾ ಐಟಂ ನಂ.1 ರಲ್ಲಿ 5 ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಸುಜಾತರವರಿಗೆ ಅವರ ತಂದೆಯಿಂದ ಬಂದಂತಹ ಆಸ್ತಿಯ ವಿವರಗಳು ನನಗೆ ಗೊತ್ತಿಲ್ಲ. ಸುಜಾತರವರ ತಂದೆ ರಾಮಚಂದ್ರಪ್ಪನವರು 1 ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂ.122/2 ಎ ಸರ್ವೆ ನಂ.94 ಮತ್ತು ಸರ್ವೆ ನಂ.122/2 ಬಿ ಜಮೀನುಗಳನ್ನು ಕ್ರಯಕ್ಕೆ ಕೊಡಿಸಿದರು. ದಾವಾ 2 ನೇ ತಪಶೀಲು ಪಟ್ಟಿ ಐಟಂ ನಂ.1 ರಿಂದ 4 ಆಸ್ತಿಗಳು ಸುಜಾತರವರಿಗೆ ಅವರ ತಂದೆಯ ಮನೆಯಿಂದ ಬಂದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಅಸ್ತಿಗಳ ಮೇಲೆ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2 ನೇ ತಪಶೀಲು ಪಟ್ಟಿ ಐಟಂ ನಂ. 1 ಆಸ್ತಿಯು ಸುಜಾತರವರು ದಿನಾಂಕಃ 14.02.2000 ರಂದು ಕ್ರಯಕ್ಕೆ ಪಡೆದ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಮಲ್ಲರಬಾಣವಾಡಿ ಗ್ರಾಮದ ಆಸ್ತಿ. ಸದರಿ ಆಸ್ತಿಯನ್ನು 1 ನೇ ಪ್ರತಿವಾದಿ ದಿನಾಂಕಃ 08.02.2021 ರಂದು ಮರಣ ಶಾಸನ ಮಾಡಿದ್ದಾರೆ ಎಂದರೆ ಸರಿ. ಸದರಿ ಮರಣ ಶಾಸನ ಸೌಭಗ್ಯ ಮತ್ತು ಧನುಷ್ ರವರ ಹೆಸರಿಗೆ

ಮಾಡಿರುತ್ತಾರೆ. ಸದರಿ ಸೌಭಾಗ್ಯ 1 ನೇ ಪ್ರತಿವಾದಿಯ 2 ನೇ ಹೆಂಡತಿ. ಸದರಿ ಮರಣ ಶಾಸನವನ್ನು ಈ ದಾವೆ ನಡೆಯುತ್ತಿರುವಾಗ ಮಾಡಿದ್ದಾರೆ ಎಂದರೆ ಸುಳ್ಳು. 1 ನೇ ಪ್ರತಿವಾದಿಯ ಮೊದಲನೇ ಹೆಂಡತಿ ಸುಜಾತ ಯಾವಾಗ ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 05.09.2007 ರಂದು ಸದರಿ ಸುಜಾತರವರು ಮರಣ ಹೊಂದಿದ್ದಾರೆ ಎಂದರೆ ಸರಿ. ಸುಜಾತರವರ ಹೆಸರಿನಲ್ಲಿದ್ದ ಆಸ್ತಿಗಳನ್ನು ಅವರ ಮರಣದ ನಂತರ ಪೌತಿ ವಾರಸು ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ ಸರಿ. ಸುಜಾತರವರಿಗೆ ಅವರ ತವರು ಮನೆಯಿಂದ ಬಂದ ಆಸ್ತಿಗಳು ಮತ್ತು ಸುಜಾತರವರು ಖರೀದಿ ಮಾಡಿದ ಆಸ್ತಿಗಳ ಮೇಲೆ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿಗಳಲ್ಲಿ ಮರಣ ಶಾಸನ ಮತ್ತು ದಾನಪತ್ರ ಬರೆಯಲು ಅವರಿಗೆ ಯಾವುದೇ ಅಧಿಕಾರ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯ ಕುಟುಂಬಕ್ಕು ಮತ್ತು ನನ್ನ ನಡುವೆ ಸಾಕಷ್ಟು ವಿವಾದಗಳು ಇವೆ ಎಂದರೆ ಸರಿಯಲ್ಲ. ಸೌಭಾಗ್ಯಮ್ಮನವರು ನನಗೆ ಸುಮಾರು 25 ವರ್ಷಗಳಿಂದ ಪರಿಚಯ ಇದೆ. ಸದರಿ ಸೌಭಾಗ್ಯಮ್ಮನವರು ವಾದಿಯ ವಿರುದ್ದ ನೆಲಮಂಗಲದ ನ್ಯಾಯಾಲಯದಲ್ಲಿ ಈ ದಾವೆಯ ಆಸ್ತಿಗಳ ಮೇಲೆ ದಾವೆ ಸಲ್ಲಿಸಿದ್ದಾರೆ. ಅದರ ಪ್ರಕರಣ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಸಂಖ್ಯೆ OS No.452/2013 ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ನೆಲಮಂಗಲದಿಂದ ಈ ನ್ಯಾಯಾಲಯಕ್ಕೆ ವರ್ಗಾವಣೆ ಆಗಿದೆ. ನೆಲಮಂಗಲದ ದಾವೆಯನ್ನು ಸ್ವಲ್ಪ ದಿನ ನಡೆಸಿ ನಂತರದಲ್ಲಿ ಹಿಂಪಡೆದಿದ್ದಾರೆ ಎಂದರೆ ಸರಿಯಲ್ಲ. ಈಗ ವಾದಿಯ ವಿರುದ್ದ ನೆಲಮಂಗಲದಲ್ಲಿ ಒಂದು ದಾವೆ ನಡೆಯುತ್ತಿದೆ. ಸದರಿ ದಾವೆಯ ಪ್ರಕರಣ ಸಂಖ್ಯೆ ನನಗೆ ಗೊತ್ತಿಲ್ಲ. ವಾದಿಯ ವಿರುದ್ದ OS No.193/2020 ಮತ್ತು OS No.194/2020, 204/2018 ದಾವೆಗಳು ನೆಲಮಂಗಲದಲ್ಲಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದ್ದಾವೆ ಎಂದರೆ ನನಗೆ ಗೊತ್ತಿಲ್ಲ. ಗುಬ್ಬಿ ಸಿವಿಲ್ ನ್ಯಾಯಾಲಯದಲ್ಲಿ ಹಾಕಿದ ದಾವೆಯ ವಿಷಯ ನನಗೆ ಗೊತ್ತಿಲ್ಲ. ಸದರಿ ಪ್ರಕರಣದ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದ ಸಂಖ್ಯೆ OS

No.360/2013 ಎಂದರೆ ಸರಿ. ಸದರಿ ದಾವೆಯು ಈ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದೆ ಎಂದರೆ ಸರಿ.

(Further cross examination deferred at the request of counsel for the plaintiff)

(Typed to my dictation in open court)

R.O.I & A.C.

Addl. Senior Civil Judge and
JMFC., Gubbi